**ಸಾಕ್ಷಿಯನ್ನು ದಿನಾಂಕ 09-01-2026 ರಂದು ಕರೆಸಿ ಸತ್ಯ ಪ್ರಮಾಣ ಮಾಡಿಸಲಾಯಿತು.**
**<u>ಪಾಟೀ ಸವಾಲು:- 1 ಮತ್ತು 7 ನೇ ಪ್ರತಿವಾದಿಗಳ ಪರ ಶ್ರೀ DGT ವಕೀಲರಿಂದಃ</u>**

ನಮ್ಮ ಗ್ರಾಮದಿಂದ ತೋವಿನಕೆರೆಗೆ **1** ಕಿ ಮೀ ಅಂತರ ಆಗುತ್ತದೆ. ನನ್ನ ಸಾಕ್ಷ್ಯ ಪ್ರಮಾಣಪತ್ರದ ಅಂಶಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ದಬ್ಬೆಘಟ್ಟ ರಸ್ತೆ ಪಕ್ಕದಲ್ಲಿ ನನ್ನ ಮನೆ ಬರುವುದಿಲ್ಲ ಎಂದರೆ ಸರಿ. ನಾನು ತೋವಿನಕೆರೆ ಗ್ರಾಮ ಪಂಚಾಯಿತಿಯ ಸದಸ್ಯನಾಗಿರುವ ಕಾರಣ ನನಗೆ ಸದರಿ ಗ್ರಾಮದಲ್ಲಿ ನಡೆಯುವ ಆಗುಹೋಗುಗಳ ಬಗ್ಗೆ ನನಗೆ ತಿಳಿಯುತ್ತದೆ ಎಂದರೆ ಸರಿ. ವಾದಿಯ ಮುತ್ತಾತ ಹನುಮಂತಯ್ಯರವರಿಗೆ **5** ಜನ ಹೆಣ್ಣು ಮಕ್ಕಳು ಹಾಗೂ **3** ಜನ ಗಂಡು ಮಕ್ಕಳು ಇದ್ದರು. ಸದರಿ ಹನುಮಂತಯ್ಯರವರ **5** ಜನ ಗಂಡುಮಕ್ಕಳು ಪ್ರತ್ಯೇಕವಾಗಿ ಮನೆಗಳನ್ನು ಕಟ್ಟಿಕೊಂಡು ಪ್ರತ್ಯೇಕವಾಗಿ ವಾಸ ಮಾಡುತ್ತಿರುತ್ತಾರೆ. ಅದೇ ರೀತಿ ಅವರು ಜಮೀನುಗಳನ್ನು ಪ್ರತ್ಯೇಕವಾಗಿ ಅನುಭವಿಸುತ್ತಿರುತ್ತಾರೆಂದರೆ ಸರಿ. ಸದರಿ **5** ಜನ ಮಕ್ಕಳ ಪೈಕಿ ಕೆಲವರು ಅವರ ಭಾಗಕ್ಕೆ ಬಂದ ಆಸ್ತಿಗಳ ಪೈಕಿ ಕೆಲವು ಆಸ್ತಿಗಳನ್ನು ಮಾರಾಟ ಮಾಡಿರುತ್ತಾರೆಂದರೆ ಸರಿ. ಕ್ರಯಕ್ಕೆ ಪಡೆದು ಅವರ ಹೆಸರಿಗೆ ಖಾತೆಗಳಾಗಿದ್ದು, ಅವರೇ ಈಗ ಸ್ವಾಧೀನದಲ್ಲಿರುತ್ತಾರೆಂದರೆ ಸರಿ.

**2.** **1** ನೇ ಪ್ರತಿವಾದಿ ಸಂಸ್ಥೆಗೆ ಸೇರಿದ ಆಸ್ತಿಯ ಬಗ್ಗೆ ನಾನು ಕೇಳಿರುತ್ತೇನೆ. ದಾವಾ ಆಸ್ತಿಯು ಹನುಮಂತಯ್ಯರವರು ಮೃತ ಪಟ್ಟ ನಂತರ ಅವರ ಹಿರಿಯ ಮಗ ಚಿಕ್ಕಯ್ಯಣ್ಣರವರ ಹೆಸರಿಗೆ ಬಂದಿರುವ ಬಗ್ಗೆ ನನಗೆ ಗೊತ್ತು. ನಂತರ ಚಿಕ್ಕಯ್ಯಣ್ಣರವರು **1964** ನೇ ಸಾಲಿನಲ್ಲಿ ಹನುಮಂತಯ್ಯ ಬಿನ್ ಸಂಜೀವಪ್ಪರವರಿಗೆ ಸರ್ವೆ ನಂ **121/1** ರ ಪೈಕಿ **16** ಗುಂಟೆ ಯನ್ನು ಮಾರಾಟ ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿ ಈಗ ಸರ್ವೆ ನಂ **121/8** ಆಗಿದ್ದು, ಹನುಮಂತಯ್ಯರವರ ಹೆಸರಿನಲ್ಲಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ಗ್ರಾಮ ಪಂಚಾಯಿತಿ ಸದಸ್ಯನಾದ ಕಾರಣ ದಾವಾ ಆಸ್ತಿಯ ಅಕ್ಕಪಕ್ಕದಲ್ಲಿರುವ ಆಸ್ತಿಗಳು ಹಾಗೂ ಮನೆಗಳ ಸರ್ವೆ ನಂ ಮತ್ತು ಖಾತೆ ನಂಬರ್ ಗಳು ನನಗೆ ಗೊತ್ತು ಎಂದರೆ ಸರಿ. ಸರ್ವೆ ನಂ **121/1** ರಲ್ಲಿ **16** ಗುಂಟೆ ಜಮೀನಿನಲ್ಲಿ ಹನಮಂತಯ್ಯ ಬಿನ್ ಸಂಜೀವಯ್ಯರವರು ಅಡಿಕೆ ಬೆಳೆ ಇಟ್ಟುಕೊಂಡು ಮನೆಕಟ್ಟಿಕೊಂಡು ಸ್ವಾಧೀನದಲ್ಲಿರುತ್ತಾರೆಂದರೆ ಸರಿ. ದಾವಾ ಸರ್ವೆ ನಂಬರ್ ಪೈಕಿ **26** ಗುಂಟೆ ಜಮೀನಿನಲ್ಲಿ ವಾದಿಯ ತಂದೆ, ಪ್ರತಿವಾದಿ **6,8** ಮತ್ತು ರತ್ನಮ್ಮ ಕೋಂ ಭೀಮರಾಜುರವರು ಮನೆಗಳನ್ನು ಕಟ್ಟಿಕೊಂಡು ಸ್ವಾಧೀನದಲ್ಲಿರುತ್ತಾರೆಂದರೆ, ಟಿ ಕೆ ರಾಜಣ್ಣರವರು ಮಾತ್ರ ಸ್ವಾಧೀನದಲ್ಲಿರುತ್ತಾರೆ.

**3.** **1** ನೇ ಪ್ರತಿವಾದಿ ಸಂಸ್ಥೆಯ ಅಧ್ಯಕ್ಷರ ಬಗ್ಗೆ ಮಾತ್ರ ನನಗೆ ಗೊತ್ತು. ಮೊದಲು **7** ನೇ ಪ್ರತಿವಾದಿಯ ತಂದೆ ಟಿ ಹೆಚ್ ಹನುಮಂತಯ್ಯರವರು **1** ನೇ ಪ್ರತಿವಾದಿ ಸಂಸ್ಥೆಗೆ ಕಾರ್ಯದರ್ಶಿಯಾಗಿದ್ದು, ಅವರ

ಮರಣಾನಂತರ **7** ನೇ ಪ್ರತಿವಾದಿ ಕಾರ್ಯದರ್ಶಿಯಾಗಿರುತ್ತಾರೆಂದರೆ ಸರಿ. ನಾನು ಸಾಕ್ಷ್ಯ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ನೀಡುವಾಗ ನನಗೆ ಗೊತ್ತಿದ್ದ ಅಂಶಗಳ ಬಗ್ಗೆ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿರುತ್ತೇನೆ. ಆ ಸಮಯದಲ್ಲಿ ಬೇರೆ ಏನು ದಾಖಲೆಗಳನ್ನು ಇಟ್ಟುಕೊಂಡಿರುವುದಿಲ್ಲ.

**4.** ತೋವಿನಕೆರೆ ಗ್ರಾಮದ ಸರ್ವೆ ನಂ **63** ಚೆನ್ನಿಗಪ್ಪರವರಿಗೆ ಸೇರಿದ ಜಮೀನಾಗಿತ್ತು. ಸದರಿ ಚೆನ್ನಿಗಪ್ಪರವರು **1** ನೇ ಪ್ರತಿವಾದಿ ಸಂಸ್ಥೆ ಹೆಸರಿಗೆ ಮೇಲೆ ಹೇಳಿದ ಜಮೀನನ್ನು ಕ್ರಯ ಮಾಡಿರುತ್ತಾರೆ. **1** ನೇ ಪ್ರತಿವಾದಿ ನಡೆಸುತ್ತಿರುವ ಶಾಲೆ ಮತ್ತು ಕಾಲೇಜಿನಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸೂರೇನಹಳ್ಳಿಗ್ರಾಮದ ವೆಂಕಟರವಣಪ್ಪರವರು ತೋವಿನಕೆರೆ ಗ್ರಾಮದ ಸರ್ವೆ ನಂ **63** ನ್ನು **1** ನೇ ಪ್ರತಿವಾದಿ ಸಂಸ್ಥೆ ಹೆಸರಿಗೆ ದಾನ ಮಾಡಿರುತ್ತಾರೆಂದರೆ ಸರಿಯಲ್ಲ. ಆ ಬಗ್ಗೆ ನನಗೆ ವಾದಿ ತಿಳಿಸಿರುತ್ತಾರೆಂದರೆ ಸರಿಯಲ್ಲ. ನನ್ನ ತಂದೆ ಮತ್ತು **7** ನೇ ಪ್ರತಿವಾದಿ ತಂದೆ ನಡುವೆ ಮೊದಲಿನಿಂದಲೂ ರಾಜಕೀಯವಾಗಿ ದ್ವೇಷ ಇರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಜಾಗವನ್ನು ಬಿಟ್ಟುಕೊಡುವುದಾಗಿ ಹೊಸ ಕಟ್ಟಡ ಕಟ್ಟುವ ಸಮಯದಲ್ಲಿ ಹಿಂದಿನ ಕಾರ್ಯದರ್ಶಿ ಹೇಳಿದ್ದರು ಎಂಬುದರ ಬಗ್ಗೆ ನನ್ನ ದೊಡ್ಡಪ್ಪನ ಮಗನಾದ ಟಿಪಿ ಎನ್ ರಂಗಪ್ಪರವರು **1** ನೇ ಪ್ರತಿವಾದಿ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿ ಕೆಲಸ ಮಾಡುತ್ತಿದ್ದು ನನ್ನ ಜೊತೆ ಮಾತನಾಡಬೇಕಾದರೆ ನನಗೆ ಹೇಳಿರುತ್ತಾರೆ. ಆ ಬಗ್ಗೆ ನಾನು ದಾಖಲೆಗಳನ್ನು ನೋಡಿರುವುದಿಲ್ಲ. ದಾವಾ ಆಸ್ತಿಯ ಜಾಗವನ್ನು ಬಿಟ್ಟುಕೊಡುವುದಾಗಿ ಹೊಸ ಕಟ್ಟಡ ಕಟ್ಟುವ ಸಮಯದಲ್ಲಿ ಹಿಂದಿನ ಕಾರ್ಯದರ್ಶಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. **1** ನೇ ಪ್ರತಿವಾದಿ ಸಂಸ್ಥೆಯ ಕಾರ್ಯದರ್ಶಿ ಶಾಲೆಯ ಜಾಗವನ್ನು ವಾದಿಯ ಕುಟುಂಬಕ್ಕೆ ವಾಪಸ್ ನೀಡುವುದಿಲ್ಲ ಎಂಬುದನ್ನು ನಾನು ಅಂದಾಜಿನ ಮೇಲೆ ಹೇಳಿರುತ್ತೇನೆ. ದಾವಾ ಆಸ್ತಿ ಚಿಕ್ಕಯ್ಯಣ್ಣರವರ ಸ್ವಯಾರ್ಜಿತ ಆಗಿದ್ದು ಅವರು ಜೀವಿತ ಅವಧಿಯಲ್ಲಿ **1** ನೇ ಪ್ರತಿವಾದಿ ಸಂಸ್ಥೆಗೆ ದಾನ ಮಾಡಿದ್ದು, ಸದರಿ ಆಸ್ತಿಯು ವಾದಿಯ ಒಟ್ಟು ಕುಟುಂಬದ ಆಸ್ತಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಬಗ್ಗೆ ನನಗೇನು ಗೊತ್ತಿಲ್ಲದಿದ್ದರೂ ನನ್ನ ತಂದೆ ಹಾಗೂ **7** ನೇ ಪ್ರತಿವಾದಿ ತಂದೆ ನಡುವೆ ಇರುವ ದ್ವೇಷದಿಂದ ನಾನು ವಾದಿಗೆ ಸಹಾಯ ಮಾಡುವ ಕಾರಣ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓದಿ ಹೇಳಿ ಕೇಳಿ ಸರಿ ಇರುತ್ತದೆ.**

**ಸಿ.ಜೆ. ಮತ್ತು ಪ್ರ.ದ.ನ್ಯಾದಂ.**
**ಕೊರಟಗೆರೆ**

O.S.50/2012
PW-3

Plaintiff present, filed his affidavit in lieu of chief examination and examined as PW-1 got marked Ex.P. 1 to 12.

Sri. DCS prays time.

Further chief of PW 1 by: 10-09-2025

Civil Judge and JMFC.
*Koratagere.*